## ಬಿನಾಕ ಗೊಂಬೆಗಳ ನೆನಪು...

ಬಿನಾಕ ಟೂತ್ಪೇಸ್ಟ್ ಈಗ ದಂತಕತೆಯಾಗಿದೆ. 1960–70ರ ದಶಕದಲ್ಲಿ ಹಲ್ಲುಜ್ಜಲು ಆ ಪೇಸ್ಟ್ ಬಳಸುತ್ತಿದ್ದರು. ಆ ಪೇಸ್ಟ್‌ನ ಪ್ಯಾಕೆಟ್‌ನಲ್ಲಿ ಒಂದು ಇಲ್ಲವೆ ಎರಡು ಸಣ್ಣ ರಬ್ಬರ್ ಗೊಂಬೆಗಳ ಉಡುಗೊರೆ ಕೊಡುತ್ತಿದ್ದರು. ಸಾಮಾನ್ಯವಾಗಿ ಜಲಚರಗಳು, ವನ್ಯಪ್ರಾಣಿಗಳ ಗೊಂಬೆಯನ್ನೇ ನೀಡುತ್ತಿದ್ದರು. ಪ್ರತಿಯೊಂದು ತುಂಬಾ ಮುದ್ದಾಗಿ ಕಾಣಿಸುತ್ತಿದ್ದವು. ಅಂತಹ 120ಕ್ಕಿಂತಲೂ ಹೆಚ್ಚು ವಿವಿಧ ಪ್ರಾಣಿ– ಪಕ್ಷಿಗಳ ಗೊಂಬೆಗಳ ಸಂಗ್ರಹವನ್ನು ಶಿವಮೊಗ್ಗದ ಇಂದಿರಾ ಮಾಡಿದ್ದಾರೆ. ಅದೆಲ್ಲದಕ್ಕೂ ಒಂದು ರೂಪಕೊಟ್ಟು ಕಾರ್ಡ್‌ಬೋರ್ಡ್‌ಗೆ ಅಂಟಿಸಿ ಶೋಕೇಸ್ ಅಲಂಕರಿಸಿದ್ದಾರೆ.

–ಸಿಹಿಮೊಗೆ ರಮೇಶ್, ಮೈಸೂರು





## ಮೋಹಕ ಮಂಗ್ಯಾನ ಮಹಲ್

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಆದಿಶಕ್ತಿ ಬನಶಂಕರಿ ದೇವಸ್ಥಾನದಲ್ಲಿರುವ ‘ಹರಿದ್ರಾತೀರ್ಥ’ಕ್ಕೆ ಹೊಂದಿಕೊಂಡಿರುವ ಸ್ಥಳ. ಇದು ವಿಭಿನ್ನವಾದ ಕಮಾನುಗಳನ್ನು ಹೊಂದಿದೆ. ದೀಪ ಸ್ತಂಭಗಳನ್ನು ಸುತ್ತಲೂ ಅಲಂಕರಿಸಲಾಗಿದೆ. ಹರಿದ್ರಾತೀರ್ಥ ತುಂಬಿದಾಗ ‘ಮಂಗ್ಯಾನ ಮಹಲ್’ ಮೇಲಿನಿಂದ ಹರಿದ್ರಾತೀರ್ಥದೊಳಗೆ ದುಮುಕುವ ಸಾಹಸ ತುಂಬಾ ರೋಮಾಂಚಕ ಅನುಭವವನ್ನು ಕೊಡುತ್ತದೆ. ಈ ಮಂಗ್ಯಾನ ಮಹಲ್‌ಗೆ ಶತಮಾನಗಳ ಇತಿಹಾಸವಿದ್ದು. ದೇವಿದರ್ಶನಕ್ಕೆ ಮೊದಲು ಹರಿದ್ರಾತೀರ್ಥ ಸ್ನಾನ ತುಂಬಾ ಶ್ರೇಷ್ಠ ಹಾಗೂ ಯುವಸಮೂಹದ ದೇಹ ಹುರಿಗೊಳಿಸುವ ಮಂಗ್ಯಾನ ಮಹಲ್ ಸಾಹಸದ ಪ್ರತೀಕವಾಗಿದೆ.

–ಮಹಾಂತೇಶ ಬಾಗೇವಾಡಿ, ಚೊಳಚಗುಡ್ಡ



## ಬಿಂದಿ ತೊಟ್ಟ ಬಸಳೆ

ನಮ್ಮ ತಾರಸಿತೋಟದ ಕುಂಡವೊಂದರಲ್ಲಿ ಸೊಂಪಾಗಿ ಬೆಳೆದ ಬಸಳೆ ಎಲೆಗಳು ಇದ್ದಕ್ಕಿದ್ದಂತೆ ಬಿಂದಿ ತೊಟ್ಟು ನಿಂತದ್ದು ಕಂಡುಬಂತು. ವೃತ್ತಾಕಾರದ ಕುಂಕುಮ ಬಣ್ಣದ ಬಿಂದಿಯ ಮಧ್ಯೆ ಬಿಳಿ ಬೊಟ್ಟುಗಳು. ಇಂತಹ ವಿಚಿತ್ರ ಕಂಡದ್ದು ಇದೇ ಮೊದಲು. ಪೋಷಣೆ, ನೀರಿನ ಅಭಾವವೆನ್ನಲು ಕಾರಣವಿರಲಿಲ್ಲ. ಕೊರೊನಾದಂತಹ ಯಾವುದಾದರೂ ಅರಿಯದ ರೋಗ ಗಿಡವನ್ನು ಬಾಧಿಸುತ್ತಿದೆಯೇ ಎಂದು ಯೋಚಿಸಿದೆ. ಉತ್ತರ ಸಿಗಲಿಲ್ಲ. ಪರಿಹಾರವೂ ದೊರಕಲಿಲ್ಲ. ಪ್ರಕೃತಿಯ ವೈಚಿತ್ರ್ಯಗಳಲ್ಲಿ ಇದೂ ಒಂದು ಇದ್ದೀತು ಎಂದರಿತು ತಣ್ಣಗೆ ಬಿಂದಿಯಿಂದ ಸಿಂಗರಿಸಿ ನಿಂತಿರುವ ಗಿಡದ ಚಿತ್ರ ಕ್ಲಿಕ್ಕಿಸಿದೆ.

–ಧರ್ಮಾನಂದ ಶಿರ್ವ, ಬೆಂಗಳೂರು